ತಿರುಮಲ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ
ಮಾರ್ಚ್ 2020

## ಸಪ್ತಗಿರಿ ಅನುಬಂಧ




ಕರಾರವಿಂದೇನ ಪದಾರವಿಂದಂ
ಮುಖಾರವಿಂದೇ ವಿನಿವೇಶಯಂತಮ್ ।
ವಟಸ್ಯ ಪತ್ರಸ್ಯ ಪುಟೇ ಶಯಾನಂ
ಬಾಲಂ ಮುಕುಂದಂ ಮನಸಾ ಸ್ಮರಾಮಿ ॥



ಬ್ರಹ್ಮೋತ್ಸವದಲ್ಲಿ ಬಾಲಕಲಾವಿದರು....




ತಿರುಮಲೆ ತಿರುಪತಿ ದೇವಸ್ಥಾನಗಳು

# ಬಾಲ ಸಪ್ತಗಿರಿ

ಸಪ್ತಗಿರಿ ಅನುಬಂಧ

ಮಾರ್ಚ್ 2020

ಸಂಪುಟ - 01

ಸಂಚಿಕೆ - 01





## ವಿಷಯ ಸೂಚಿಕೆ


| | | ಪುಟ |
|---|---|---|
| ಹಿಂದೂ ದೇವರು | ಶ್ರೀ ಮತ್ಸ್ಯಾವತಾರ ಮೂರ್ತಿ<br>-ಭಾರತಿ ರಘುನಾಥ್ | 04 |
| ಹನ್ನೆರಡು ಆಳ್ವಾರರು | ಪೋಯ್‌ಗೈ ಆಳ್ವಾರ್<br>- ಸೂರ್ಯವಂಶಿ | 06 |
| ಕನ್ನಡ ಹರಿದಾಸವರೇಣ್ಯರು | ಪುರಂದರದಾಸರು<br>- ಶ್ರೀಮತಿ. ಸುಧಾಮಧುಸೂದನ್ | 08 |
| ಚಿತ್ರಕಥೆ | ಮಣ್ಣಿನ ದಳಗಳೆಂದರೆ ಬಲು ಪ್ರೀತಿ!<br>ಕಥೆ - ಶ್ರೀನಿವಾಸ ದೀಕ್ಷಿತರು<br>ಚಿತ್ರಗಳು - ಕಲಾರತ್ನ ದೇವಿಜೀ | 10 |
| ಬಾಲನೀತಿ | ಮಹಾತ್ಮರನ್ನೇ ಆಶ್ರಯಿಸಬೇಕು!<br>- ಶ್ರೀಮತಿ | 14 |
| ಪ್ರಜ್ಞಾವಂತ ಬಾಲಕ | | 16 |
| ಕ್ವಿಜ್ | - ಶ್ರೀಮತಿ. ವಿ. ಉಮಾರಾಣಿ | 17 |
| ಚಿತ್ರಲೇಖನ | | 18 |


ಮುಖಚಿತ್ರ - ವಟಪತ್ರಶಾಯಿ

ಹಿಂಬದಿಚಿತ್ರ - ಶ್ರೀ ವೆಂಕಟೇಶ್ವರ ಸ್ವಾಮಿಯವರು

**ಭಗವಂತನ ಕೃಪಾಕಟಾಕ್ಷದಿಂದಲೇ ಈ ಅನಂತವಿಶ್ವವು ಸಾಗುತ್ತದೆ. ಈ ಭಗವಂತನ ವಿಶೇಷತೆಗಳನ್ನು ಪ್ರತಿ ತಿಂಗಳು 'ಹಿಂದೂ ದೇವರುಗಳು' ಧಾರಾವಾಹಿಯಲ್ಲಿ ತಿಳಿದುಕೊಳ್ಳೋಣ ಮಕ್ಕಳೆ.**


**ಹಿಂದೂ ದೇವರುಗಳು**

# ಶ್ರೀ ಮತ್ಸ್ಯಾವತಾರ ಮೂರ್ತಿ

– ತೆಲುಗು ಮೂಲ: ಡಾ|| ಜಿ. ರಮೇಶ್ ಬಾಬು

– ಅನುವಾದ : ಭಾರತಿ ರಘುನಾಥ್

ದಶಾವತಾರದಲ್ಲಿ ಶ್ರೀ ಮತ್ಸ್ಯಾವತಾರ ಮೊಟ್ಟ ಮೊದಲನೇಯದು. ಕಲ್ಪಾಂತ್ಯದಲ್ಲಿ ಬ್ರಹ್ಮದೇವನು ನಿದ್ರೆಗೆ ಜಾರಿದ್ದಾನೆ. ನಿದ್ರಾವಸ್ಥೆಯಲ್ಲಿ ಬ್ರಹ್ಮದೇವನು ಬಾಯಿ ತೆರೆಯಲು ಆ ಬಾಯಿಂದ ಹೊರಬಿದ್ದ ವೇದ ಮಾತೆಯನ್ನು ಸೋಮಕನೆಂಬ ರಾಕ್ಷಸನು ಎತ್ತಿಕೊಂಡು ಓಡಿ ಹೋಗಿದ್ದಾನೆ. ಇದನ್ನು ಬ್ರಹ್ಮನ ಗಮನಕ್ಕೆ ಬರಲಿಲ್ಲ - ಆದರೆ ಸರ್ವಾಂತರ್ಯಾಮಿಯಾದ ವಿಷ್ಣುವು ನೋಡಿದ್ದಾನೆ. ವೇದಮಾತೆಯನ್ನು ಸೋಮಕನೆಂಬ ಕಳ್ಳನಿಂದ ಕಾಪಾಡಲು ಭಗವಂತನು ಮತ್ಸ್ಯಾವತಾರವನ್ನು ಎತ್ತಿದ್ದಾನೆ. ಕೃತಮಾಲವೆಂಬ ನದಿಯಲ್ಲಿ ಚಿಕ್ಕಮೀನಾಗಿ ಅವತರಿಸಿದ್ದಾನೆ.



ಅದು ಸತ್ಯಯುಗ. ಸತ್ಯವ್ರತನೆಂಬ ರಾಜ ಭೂಮಂಡಲವನ್ನು ಆಳುತ್ತಿದ್ದ ದಿನಗಳವು. ಒಂದು ದಿನ ಆ ರಾಜ ಕೃತಮಾಲೆಯಲ್ಲಿ ಸ್ನಾನ ಮುಗಿಸಿ ತರ್ಪಣ ಬಿಡುವಾಗ ಆತನ ಬೊಗಸೆಯಲ್ಲಿ ಚಿಕ್ಕ ಮೀನಾಗಿ ಅವತರಿಸಿದ ಶ್ರೀ ಮಹಾವಿಷ್ಣುವು ಬಂದಿದ್ದಾನೆ. "ರಾಜಾ! ನನ್ನನ್ನು ಈ ನದಿಯಲ್ಲಿ ಮರಳಿ ಬಿಡಬೇಡ. ದೊಡ್ಡ ದೊಡ್ಡ ಮೀನುಗಳಿವೆ. ಅವು ನನ್ನನ್ನು ನುಂಗಿ ಬಿಡಬಹುದು." ಎಂದು ಆ ಚಿಕ್ಕ ಮೀನು ಸತ್ಯವ್ರತನನ್ನು ವಿನಂತಿಸಿದೆ. ಸತ್ಯವ್ರತನು ಆಶ್ಚರ್ಯಚಕಿತನಾಗಿ ಆ ಮೀನನ್ನು ತನ್ನ ಕಮಂಡಲದಲ್ಲಿಟ್ಟುಕೊಂಡಿದ್ದಾನೆ. ಮರುದಿನ ಆ ಮೀನು ಕಮಂಡಲದಲ್ಲಿಟ್ಟುಕೊಂಡಿದ್ದಾನೆ.


ಮರುದಿನ ಆ ಮೀನು ಕಮಂಡಲದಲ್ಲಿಟ್ಟು ಕೊಂಡಿದ್ದಾನೆ. ಮರುದಿನ ಆ ಮೀನು ಕಮಂಡಲದಲ್ಲಿ ಹಿಡಿಯದಷ್ಟು ಬೆಳೆದಿದೆ. ದೊಡ್ಡದಾಗಿದೆ. ರಾಜನು ಅದನ್ನು ಬಾವಿಯಲ್ಲಿ ಹಾಕಿದ್ದಾನೆ. ಮರುದಿನ ಆ ಮೀನು ಮತ್ತಷ್ಟು ದೊಡ್ಡದಾಗಿ ಬಾವಿಯಲ್ಲಿ ಹಿಡಿಯಲಿಲ್ಲ.

ರಾಜನು ಅದನ್ನು ಸರೋವರದಲ್ಲಿ, ನದಿಯಲ್ಲಿ ಕಡೆಗೆ ಸಮುದ್ರದಲ್ಲಿ ಬಿಟ್ಟು "ಮಹಾನುಭವ ! ನೀನ್ಯಾರು? ಏತಕ್ಕಾಗಿ ನನ್ನನ್ನು ಶೋಧನೆಗೊಳಪಡಿಸುತ್ತಿರುವೆ?" ಎಂದು ಪ್ರಶ್ನಿಸಿದ್ದಾನೆ. ಆಗ ಮತ್ಸರೂಪದಲ್ಲಿರುವ ಶ್ರೀಮನ್ನಾರಾಯಣನು ನಕ್ಕು "ರಾಜಾ! ನಾನು ಶ್ರೀ ಮಹಾವಿಷ್ಣುವು. ಮತ್ಸ್ಯಾವತಾರವೆನ್ನೆತ್ತಿದ್ದೇನೆ. ಇದು ಕಲ್ಪಾಂತ್ಯದ ಸಮಯ. ಇಂದಿಗೆ ಏಳುದಿನಕ್ಕೆ ಸರಿಯಾಗಿ ಜಲಪ್ರಳಯವಾಗಲಿದೆ. ನೀನು ಸಕಲ ಜೀವಧಾತುಗಳನ್ನು, ಸಪ್ತರ್ಷಿಗಳನ್ನು, ವಾಸುಕಿಯನ್ನು ಎಲ್ಲವನ್ನು ತೆಗೆದುಕೊಂಡು ಒಂದು ಹಡಗಿನಲ್ಲಿ ನನಗಾಗಿ ಕಾಯುತ್ತಿರು. ನಾನು ಮತ್ಸ್ಯನಾರಾಯಣನಾಗಿ ಬಂದು ನಿಮ್ಮೆಲ್ಲರನ್ನು ರಕ್ಷಿಸುತ್ತೇನೆ. ಮುಂದೆ ಬರಲಿರುವುದು ಚಕ್ಷುಕ ಮನ್ವಂತರ. ಅದಕ್ಕೆ ಮನುವು ನೀನೇ" ಎಂದು ನುಡಿದಿದೆ ಆ ಮೀನು.

ಅದನ್ನು ತನ್ನ ಮಹಾಪ್ರಸಾದವೆಂದರಿತು ಸಪ್ತರ್ಷಿಗಳನ್ನು ಕರೆದು ಅವರಿಗೆ ದೈವೋಪದೇಶ ಕೇಳಿಸಿ ಸಕಲ ಜೀವಧಾತುಗಳೊಂದಿಗೆ ಹಡಗನ್ನು ಏರಿ ವಾಸುಕಿಯ ಜೊತೆಯಲ್ಲಿ ನಾರಾಯಣನ ಸಲುವಾಗಿ ಕಾದು ಕುಳಿತಿದ್ದಾನೆ.

ಏಳನೇ ದಿನಕ್ಕೆ ಕಲ್ಪಾಂತ್ಯ ಒಂದೊದಗಿದೆ. ಪ್ರಳಯಾರಂಭವಾಗಿದೆ. ಶ್ರೀ ಮತ್ಸ್ಯನಾರಾಯಣನು ತನ್ನ ಕೊಂಬಿನಿಂದ ವಾಸುಕಿಯನ್ನು ಹಿಡಿಯಲು ವಾಸುಕಿಯು ತನ್ನ ಬಾಲದಿಂದ ಹಡಗನ್ನು ಸುತ್ತಿ ಕೊಂಡಿದೆ. ಸ್ವಾಮಿ ಎಳೆದುಕೊಂಡು ಹೋದೆಡೆಗೆ ಸತ್ಯವ್ರತನು, ಸಪ್ತರ್ಷಿಗಳು, ಸಕಲ ಜೀವಧಾತುಗಳು ಹಿಂಬಾಲಿಸಿವೆ. ಏಳನೇ ದಿನ ಆ ರಾಕ್ಷಸರು ಕೂಗಾಡುತ್ತಾ ಹೊರಬರಲು ಶ್ರೀ ಮತ್ಸ್ಯಾವತಾರ ಮೂರ್ತಿ ಅವನನ್ನು ವಧಿಸಿ ವೇದ ಮಾತೆಯನ್ನು ಬ್ರಹ್ಮದೇವನ ವಶಕ್ಕೆ ಕೊಟ್ಟಿದ್ದಾನೆ. ಸಕ್ರಮವಾಗಿ ಚಕ್ಷುಕ್ಷ ಮನ್ವಂತರ ಮೊದಲುಗೊಂಡಿದೆ. ಪುನಃ ಸೃಷ್ಟಿ ಆರಂಭವಾಗಿದೆ. ಅವತಾರದ ಗುರಿ ನೆರವೇರಿದೆ. ನೀರಿನ ಪಾಲಾದ ವೇದಗಳನ್ನು ಜಲದಲ್ಲೇ ಮತ್ಸ್ಯನಾಗಿ ರಕ್ಷಿಸಿದ ಕರುಣಾಮೂರ್ತಿ ಶ್ರೀಮನ್ನಾರಾಯಣ ಮೂರ್ತಿ. ಇದು ಮತ್ಸ್ಯನಾಥನ ಅವತಾರ ವಿಶೇಷ.!

**ನಿರಂತರ ಭಗವಂತನ ನಾಮಸ್ಮರಣೆಯಲ್ಲಿಯೇ ಇದ್ದವರು ಆಳ್ವಾರರು. ಇಹಪರ ಸಾಧನೆಗೆ ಭಕ್ತಿಯೇ ವಿನಹ ಸನ್ಮಾರ್ಗ ಇಲ್ಲವೆಂದು ನಿರೂಪಿಸಿದ ದಿವ್ಯಮೂರ್ತಿಗಳು ಆಳ್ವಾರರು. ಪರಮ ಭಾಗವತ್ತೋತ್ತಮರು ಇವರೇ, ಎಷ್ಟೋ ತಲೆಮಾರಿಗೂ ಮಾರ್ಗದರ್ಶಕವಾಗಿದ್ದಾರೆ ಇವರು 12 ಮಂದಿ. ಇವರ ಬಗ್ಗೆ ತಿಳಿಸುವುದೇ ಈ "ಹನ್ನೆರಡು ಆಳ್ವಾರರ" ಧಾರಾವಾಹಿಯ ಮುಖ್ಯ ಉದ್ದೇಶ!**



# ಪೋಯ್‌ಗೈ ಆಳ್ವಾರ್

**-ಮೂಲ: ಡಾ॥ ಕೆ. ರವಿಚಂದ್ರನ್**

**- ಅನುವಾದ : ಸೂರ್ಯವಂಶಿ**

ದಕ್ಷಿಣಭಾರತದೇಶದಲ್ಲಿ 'ಕಾಂಚಿಪುರ' ಪ್ರಸಿದ್ಧವಾದ ಪುಣ್ಯಕ್ಷೇತ್ರ. ಇಲ್ಲಿ ಅನೇಕ ದೇವಾಲಯಗಳಿವೆ. ಅವುಗಳಲ್ಲಿ 'ತಿರುವೆಕ್ಕಾ' ದೇವಾಲಯವೂ ಒಂದು. ಈ ಕ್ಷೇತ್ರದ ಉತ್ತರ ಭಾಗದಲ್ಲಿ ಪರಮ ಪಾವನವಾದ ತಾವರೆಯ ಕೊಳದಲ್ಲಿ ಪೋಯ್‌ಗೈ ಆಳ್ವಾರ್ ಜನಿಸಿದರು. ಇವರು, ತುಲಾಮಾಸದಲ್ಲಿ ಶ್ರವಣಾ ನಕ್ಷತ್ರದಂದು ಜನಿಸಿದರು.

ಇವರ ಬಾಲ್ಯದ ಬಗೆಗೆ ನಮಗೆ ತಿಳಿದಿರುವ ಅಂಶಗಳು ಬಹಳಾ ಕಡಿಮೆಯೆಂದೇ ಹೇಳಬೇಕು. ಶ್ರೀ ಮಹಾವಿಷ್ಣುವಿನ ಸೇನಾಪತಿಯಾದ ವಿಷ್ವಕ್ಸೇನರು ಇವರಿಗೆ ಪಂಚ ಸಂಸ್ಕಾರಗಳನ್ನು ಪೂರ್ತಿಗೊಳಿಸಿ ಮೂಲ ಮಂತ್ರವನ್ನು ಉಪದೇಶಿಸಿದರು. ಪಂಚ ಸಂಸ್ಕಾರಗಳೆಲ್ಲವೂ ವೈಷ್ಣವರ ಚಿಹ್ನೆಗಳು. ಹುಟ್ಟಿನಿಂದಲೇ ವೈಷ್ಣವರಾದರೂ, ಈ ಚಿಹ್ನೆಗಳಿಂದಲೇ ಶ್ರೀ ವೈಷ್ಣವರಾಗುತ್ತಾರೆ.

ಆಳ್ವಾರರು ಬಂದು ಭಕ್ತಿಯಿಂದ ಸೇವಿಸಿ ಕೀರ್ತಿಸಿದ ಕ್ಷೇತ್ರವೇ ದಿವ್ಯದೇಶ. ಅಂತಹುವು 108 ಇವೆ. ಪೋಯ್‌ಗೈಆಳ್ವಾರ್ ಒಮ್ಮೆ ದೇಶ ಸಂಚಾರ ಮಾಡುತ್ತಾ ತಿರುಕ್ಕೋವಲೂರ್‌ಗೆ ಬಂದು. ಮೃಕಂಡು ಮಹರ್ಷಿಯ ಮನೆಯ ಕಟ್ಟೆಯ ಮೇಲೆ ವಿಶ್ರಾಂತಿ ತೆಗೆದುಕೊಂಡರು. ಅಷ್ಟರಲ್ಲಿ

ಪೂದತ್ತಾಳ್ವಾರ್ ಬಂದರು. ಪೋಯ್‌ಗೈ ಆಳ್ವಾರ್ ಅವರಿಗೆ ನಮಸ್ಕರಿಸಿದರು.

ಆ ಕಟ್ಟೆಯ ಮೇಲೆ ಒಬ್ಬರು ಮಲಗಬಹುದಾಗಿತ್ತು. ಇಬ್ಬರು ಕುಳಿತುಕೊಳ್ಳಬಹುದಾಗಿತ್ತು. ಅಷ್ಟರಲ್ಲಿ 'ಪೇಯಾಳ್ವಾರ್' ಬಂದರು. ಇಬ್ಬರು ಆಳ್ವಾರರು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿದರು. ಈ ಕಟ್ಟೆಯಲ್ಲಿ ಒಬ್ಬರು ಮಲಗಬಹುದು, ಇಬ್ಬರು ಕುಳಿತುಕೊಳ್ಳಬಹುದು ಮೂವರು ನಿಲ್ಲಬಹುದು ಎಂದು ಪೇಯಾಳ್ವಾರರು ಆಹ್ವಾನಿಸಿದರು. ಸತ್ಕಥಾ ಪ್ರಸಂಗದಿಂದ ಸಮಯ ಕಳೆಯುತ್ತಿತ್ತು. ತ್ರಿವಿಕ್ರಮನಾದ ನಾರಾಯಣನು ಇವರನ್ನು ಅನುಗ್ರಹಿಸಬೇಕೆಂದುಕೊಂಡ. ಆಗ ಜೋರಾಗಿ ಬಿರುಗಾಳಿ ಬೀಸಲಾರಂಭಿಸಿತು. ಕಟ್ಟೆಯ ಮೇಲಿದ್ದ ಆಳ್ವಾರರೆಲ್ಲಾ ಹಾಗೇ ನಿಂತಿದ್ದರು. ಆದರೆ, ಅವರ ನಡುವೆ ತೀವ್ರವಾದ ಒತ್ತಡ ಆರಂಭವಾಯಿತು. ಆ ಕಟ್ಟೆಯ ಮೇಲೆ ತಾವು ಮೂವರಲ್ಲದೇ ಇನ್ನೂ ಯಾರೋ ಪ್ರವೇಶಿಸಿದ್ದಾರೆಂದು ಅವರುಗಳಿಗೆ ಅರ್ಥವಾಯಿತು. ಆ ಸಮಯದಲ್ಲಿ ಅವರು ಮುಂದೆ ಒಂದು 'ಬೆಳಕು' ಕಂಡು ಬಂತು. ಆ ಬೆಳಕನ್ನು ನೋಡಿ ಪೋಯ್‌ಗೈ ಆಳ್ವಾರರು ಒಂದು ಪಾಶುರವನ್ನು ಹಾಡಿದರು.

ಪಾಶುರವೆಂದರೆ ಸಂಗೀತದಿಂದ ಕೂಡಿದ ಪದ್ಯವೆಂದು ಅರ್ಥ. ಆ ಪಾಶುರ ತಮಿಳಿನಲ್ಲಿತ್ತು. ಆ ಪಾಶುರದ ಭಾವ-"ಭೂಮಿ ಹಣತೆಯಂತೆ, ಸುತ್ತಲೂ ಇರುವ ನೀರು ತುಪ್ಪದಂತೆ. ಎಲ್ಲೋ ಇರುವ ಸೂರ್ಯನೇ ದೀಪ. ಆ ಬೆಳಕು ಚಕ್ರಧಾರಿಯಾದ ಸ್ವಾಮಿಗೆಯವರ ಚರಣಗಳಿಗೆ ಸೂಕ್ತಿ ಮಾಲೆಯನ್ನು ಸಮರ್ಪಿಸಿದ್ದೇನೆ" ಎಂದು ತಿಳಿಸಿದ್ದಾರೆ.

ಹಾಗೆಯೇ ಪೂದತ್ತಾಳ್ವಾರ್, ಪೇಯಾಳ್ವಾರರೂ ಪಾಶುರಗಳನ್ನು ಹಾಡಿದರು. ಆಗ ಅಲ್ಲಿ ಏರ್ಪಟ್ಟಿದ್ದ ಒತ್ತಡ ಮರೆಯಿತು. ಆ ಕಟ್ಟೆಯೇ ಬೆಳೆದು ಗರ್ಭಗುಡಿಯಾಗಿ ಕಂಡು ಬಂತು. ಭಗವಂತನು ಆ ಮೂವರಿಗೂ ದೃಗ್ಗೋಚರನಾದ. ನಂತರ ಆಳ್ವಾರರು ದೇವರ ರೂಪಲೀಲೆಯ ವಿಭಕ್ತಿ ಕೀರ್ತನೆಗಳನ್ನು ಭಜಿಸುತ್ತಾ ಹೊರಟರು. ಕೊನೆಗೆ ಆ ಪರಮಾತ್ಮನಲ್ಲೇ ಲೀನರಾದರು.

# ಪುರಂದರದಾಸರು



- ಶ್ರೀಮತಿ. ಸುಧಾಮಧುಸೂದನ್

ಪುರಂದರದಾಸರು ಕನ್ನಡ ದಾಸಸಾಹಿತ್ಯದ ಮಹೋನ್ನತ ವ್ಯಕ್ತಿ. ಪುರಂದರದಾಸರ ಹೆಸರು ದಾಸ ಸಾಹಿತ್ಯದ ಜೊತೆಗೆ ಒಂದಾಗಿ ಇಂದಿಗೂ ಅಮರವಾಗಿದೆ. ಇವರನ್ನು ಗುರುಗಳಾದ ವ್ಯಾಸರಾಯರೇ ಕೊಂಡಾಡಿದ್ದಾರೆ. ಪುರಂದರದಾಸರೇ ಕೆಲಪದಗಳಲ್ಲಿ ತಮ್ಮ ಚರಿತ್ರೆಯ ಕೆಲ ಅಂಶಗಳನ್ನು ಹೇಳಿಕೊಂಡಿದ್ದಾರೆ. ಇವರ ಮಕ್ಕಳಾದ ಮಧ್ವಪತಿದಾಸರೂ, ವಿಜಯದಾಸರೇ ಮೊದಲಾದ ಎಲ್ಲ ಹರಿದಾಸರೂ ಇವರನ್ನು ವಿಶೇಷವಾಗಿ ಸ್ತೋತ್ರ ಮಾಡಿರುತ್ತಾರೆ.

ಪುರಂದರದಾಸರು ಕ್ರಿ.ಶ. ಸುಮಾರು 1484 ರಲ್ಲಿ ಜನಿಸಿದರು. ಪುರಂದರಗಡ ಇವರ ಜನ್ಮಸ್ಥಳ. ಇವರ ತಂದೆಯ ಹೆಸರು ವರದಪ್ಪ ನಾಯಕರು. ಇವರ ಹೆಸರು ಶ್ರೀನಿವಾಸನಾಯಕರು. ಇವರು ಬಾಲ್ಯದಲ್ಲಿ ವಿದ್ಯಾಭ್ಯಾಸಮಾಡಿ,ತಮ್ಮ ಕುಲಕಸುಬಿನಲ್ಲಿ ಪರಿಶ್ರಮ ಪಡೆದು ಪ್ರಸಿದ್ಧ ಚಿನಿವಾರರಾದರು. ದ್ರವ್ಯಾರ್ಜನೆ ಹೆಚ್ಚಿದಂತೆಲ್ಲಾ ಇವರ ಲೋಭವೂ ಹೆಚ್ಚಿತು. ಆಗ ದೇವರು ಇವರಿಗೆ ಸನ್ಮಾರ್ಗ ಪ್ರದರ್ಶನ ಮಾಡಲು ಬ್ರಾಹ್ಮಣ ವೇಷದಿಂದ ಬಂದು ದೇಶಾವರಬೇಡಿ ಇವರಿಗೆ ಇವರ ಹೆಂಡತಿಯ ಔದಾರ್ಯವನ್ನು ತೋರಿಸಿಕೊಟ್ಟ. ಹೆಂಡತಿಯ ಔದಾರ್ಯವನ್ನೂ ದೈವಲೀಲೆಯನ್ನು ಅರಿತ ಇವರಿಗೆ ಐಶ್ವರ್ಯದಲ್ಲಿ ಜಿಹಾಸೆಹುಟ್ಟಿ ಸರ್ವಸ್ವವನ್ನೂ ಬ್ರಾಹ್ಮಣರಿಗೆ ದಾನಮಾಡಿ ಇವರು ಮಡದಿಮಕ್ಕಳ ಸಹಿತವಾಗಿ ವಿಜಯ ನಗರಕ್ಕೆ ಬಂದು ವ್ಯಾಸರಾಯರ ದರ್ಶನ ಮಾಡಿದರು. ಹೆಂಡತಿ ಸರಸ್ವತಿಯೊಡನೆ ಪುರಂದರಗಡ ಬಿಟ್ಟಾಗ ಇವರಿಗೆ 4 ಮಕ್ಕಳಿದ್ದರು. ಆದ್ದರಿಂದ ಇವರಿಗೆ ಆಗ ಬಹುಶ 40 ವರ್ಷ ವಯಸ್ಸಾಗಿರಬೇಕು. ಅಂದರೆ ಸುಮಾರು 1520 ರಲ್ಲಿ ವಿಜಯನಗರಕ್ಕೆ ಬಂದಿರಬಹುದು. ಇವರ ವೈರಾಗ್ಯ ವರ್ಚಸ್ಸನ್ನರಿತು ವ್ಯಾಸರಾಯರು ಇವರಿಗೆ ಮುದ್ರಾಧಾರಣ ಮಾಡಿ,


ಮಂತ್ರೋಪದೇಶ ಮಾಡಿ ದಾಸದೀಕ್ಷೆಯನ್ನು ಕೊಟ್ಟರು. ಅಂದಿನಿಂದ ಇವರು ಪುರಂದರದಾಸರಾದರು. ಪುರಂದರದಾಸರು ನಾರದಾಂಶ ಸಂಭೂತರೆಂಬ ವ್ಯವಹಾರವಿದೆ.

ದಾಸರು ವಿಜಯನಗರದಿಂದ ಹೊರಟು ತಿರುಪತಿ. ಶ್ರೀರಂಗಾದಿ ದಕ್ಷಿಣ ದೇಶದ ಯಾತ್ರೆಗಳನ್ನೆಲ್ಲಾ ಮುಗಿಸಿಕೊಂಡು, ಮೈಸೂರು ದೇಶಕ್ಕೆ ಬಂದು ಅಲ್ಲಿ ಕಳಸ, ಬೇಲೂರು, ನಂಜನಗೂಡು, ಶ್ರೀರಂಗಪಟ್ಟಣವೇ ಮೊದಲಾದ ಕ್ಷೇತ್ರಗಳ ದರ್ಶನ ಮಾಡಿ ಉಡುಪಿಗೆ ಹೋಗಿ ಕೃಷ್ಣ ದರ್ಶನ ಮಾಡಿಕೊಂಡು ಪಂಢರಪುರಕ್ಕೆ ಹೋದರು. ಈ ಕ್ಷೇತ್ರಗಳಲ್ಲಿನ ಕ್ಷೇತ್ರ ಮೂರ್ತಿಗಳ ಮಹಿಮಾ ವಿಶೇಷವನ್ನು ಇವರು ಹಾಡಿರುವರು. ಪಂಢರ ಪುರದಲ್ಲಿ ದಾಸರು ಬಹುಕಾಲ ನಿಂತರು. ಅಲ್ಲಿ ವಿಠ್ಠಲನು ಇವರೊಂದಿಗೆ ಸರಸವಾಡಿ ತೋರಿದ ಮಹಿಮೆಗಳನ್ನೆಲ್ಲ ಇವರು ಪದಗಳಲ್ಲಿ ಹೇಳಿರು ವರು. ತೀರ್ಥಯಾತ್ರೆಗಳನ್ನು ಮುಗಿಸಿಕೊಂಡು ದಾಸರು ವಿಜಯನಗ ರಕ್ಕೆ ಬಂದರು. ಅಲ್ಲಿ ವ್ಯಾಸರಾಯರಲ್ಲಿ ಇರುವಾಗ ಮಠದ ಕುಹಕಿ ಗಳು ದಾಸರ ವರ್ಚಸ್ಸನ್ನು ಸಹಿಸಲಾರದೆ ಅಸೂಯೆಯಿಂದ ನಾನಾ ರೀತಿ ದೂರುತ್ತಿದ್ದರು,ಅಂತಹ ಸಮಯದಲ್ಲಿ ದಾಸರು ತೋರಿದ ಮಹಿಮೆಗಳಿಂದ ಅವರ ಬಾಯಿ ಮುಚ್ಚುತ್ತಿತ್ತು. ಒಮ್ಮೆ ಇವರು ಮಠದ ಕಲಗಚ್ಚನ್ನೇ ದೇವರಿಗೆ ಅರ್ಪಿತವೆನ್ನಲು ವ್ಯಾಸರಾಯರು ಪೂಜಿಸುತ್ತಿದ್ದ ಶ್ರೀ ಗೋಪಾಲಕೃಷ್ಣ ವಿಗ್ರಹದ ಬಾಯಿಂದ ಕಲಗಚ್ಚಿನ ತೊಟ್ಟು ತೊಟ್ಟ ಲಾರಂಭಿಸಿತು. ದಾಸರು ರಚಿಸಿದ ಪದ-ಪದ್ಯಗಳ ಪುಸ್ತಕವನ್ನು ವ್ಯಾಸ ರಾಯರು ಪುರಂದರೋಪನಿಷತ್ತೆಂದು ಕರೆದು ಗೌರವದಿಂದ ತಮ್ಮ ವ್ಯಾಸಪೀಠದಲ್ಲಿ ಇತರ ಶಾಸ್ತ್ರಗ್ರಂಥಗಳ ಮೇಲಿಟ್ಟರು. ಇದು ಮಠದಲ್ಲಿ ವಿದ್ವಾಂಸರಿಗೆ ಸಹಿಸದೆ, ಅದನ್ನು ತೆಗೆದೆಸೆದರು. ಆದರೆ ಆ ಪುಸ್ತಕವು ಮತ್ತೆ ಹಾರಿ ಬಂದು ವ್ಯಾಸಪೀಠದಲ್ಲಿ ಕೂತಿತು. ಈ ಮಹಿಮೆಯಿಂದ ದಾಸಸಾಹಿತ್ಯ ಮಾನ್ಯವಾಯಿತು. ದಾಸರ ಮನೆಯಮುಂದೆ ನಿತ್ಯ ಬೆಳ ಗಿನ ಜಾವ ಗಂಗಾ, ಯಮುನಾದಿ ನದೀ ದೇವತೆಗಳು ಸಾರಿಸಿ ರಂಗವಲ್ಲಿ ಹಾಕುತ್ತಿದ್ದರಂತೆ. ವ್ಯಾಸರಾಯರೊಡನೆ ಮಾತಾಡುತ್ತಿದ್ದ ದಾಸರು, ವಿಜಯ ವಿಠಲನ ಗುಡಿಯಲ್ಲಿನ ಪರದೆಗೆ ಬೆಂಕಿ ಹತ್ತಿಕೊಂಡರೆ ತಮ್ಮ ಅಂಗವಸ್ತ್ರವನ್ನು ಬಿಚ್ಚಿ ಅದನ್ನಾರಿಸಿದರಂತೆ. ಹೀಗೆ ದಾಸರು ತೋರಿದ ಮಹಿಮೆಗಳು ಅನೇಕವಿದೆ. ಇವರು ಕ್ರಿ.ಶ. 1564 ನೆಯ ರಕ್ತಾಕ್ಷಿ ಸಂ ವತ್ಸರದ ಪುಷ್ಯ ಬಹುಳ ಅಮಾವಾಸ್ಯೆಯ ದಿನ ಹಂಪೆಯಲ್ಲಿ ಕೃಷ್ಣ ಪದಾ ರವಿಂದವನ್ನು ಸೇರಿದರು.


# ಮಣ್ಣಿನ ದಳಗಳೆಂದರೆ ಬಲು ಪ್ರೀತಿ!

ಕಥೆ :
ತೆಲುಗು ಮೂಲ: ಡಿ. ಶ್ರೀನಿವಾಸ ದೀಕ್ಷಿತರು
ಅನುವಾದ : ಶ್ರೀಮತಿ ಆರ್. ಕೃಷ್ಣವೇಣಿ
ಚಿತ್ರಾಲು :
ಕಳಾರತ್ನ ದೇವಿಜೀ


ಶೇಷಾಚಲಕ್ಕೆ ಉತ್ತರವಾಗಿ ಕುರುವಪುರಂ ಎಂಬ ಚಿಕ್ಕ ಗ್ರಾಮವಿದೆ. ಅಲ್ಲಿ ಭೀಮನೆಂಬ ಬಡ ಕುಂಭಾರ ನಿವಾಸಿಸುತ್ತಿದ್ದಾನೆ. ಶ್ರೀ ವೆಂಕಟೇಶ್ವರ ಸ್ವಾಮಿಯವರ ಪಾಕಶಾಲೆಗೆ ಬೇಕಾದ ಮಣ್ಣಿನ ಮಡಕೆಗಳನ್ನು ತಯಾರಿಸಿ. ಭಕ್ತಿಯಿಂದ ಸಮರ್ಪಿಸುವುದು ಭೀಮನ ನಿತ್ಯಕೃತ್ಯ. ಒಂದು ದಿನ...






ಬೆಟ್ಟಕ್ಕೆ ಹೋಗದಿದ್ದರೂ ಸ್ವಾಮಿಯವರ ವಿಗ್ರಹವನ್ನು ಮಣ್ಣಿನಲ್ಲಿ ತಯಾರಿಸಿಕೊಂಡು, ತುಳಸಿ ದಳಗಳನ್ನು ಸಹ ಮಣ್ಣಿನಲ್ಲಿ ತಯಾರಿಸಿ. ಅದರೊಂದಿಗೆ ಸ್ವಾಮಿಯನ್ನು ಪೂಜಿಸುತ್ತಾ ತೃಪ್ತಿ ಪಡುತ್ತಿದ್ದನು ಭೀಮನು. ಅವನ ಹೆಂಡತಿ ತಮಾಲಿ. ಆತನಿಗೆ ಎಲ್ಲಾ ವಿಧಗಳಲ್ಲಿಯೂ ಸಹಕರಿಸುತ್ತಾ ವಿರಾಮವಿಲ್ಲದೆ ಮಡಿಕೆಯನ್ನು ತಯಾರಿಸುತ್ತಾ ಇದ್ದನು ಭೀಮನು.




ಆ ಪ್ರಾಂತ್ಯವನ್ನು ಆಳುತ್ತಿರುವ ತೊಂಡಮಾನ್ ಚಕ್ರವರ್ತಿ ಆನಂದ ನಿಲಯದಲ್ಲಿ ಸ್ವಾಮಿಯ ಅನುಗ್ರಹಕ್ಕಾಗಿ ನಿತ್ಯವೂ ಚಿನ್ನದ ತುಳಸಿ ದಳಗಳೊಂದಿಗೆ ಪೂಜೆ ಮಾಡುತ್ತಿದ್ದಾನೆ. ಒಂದು ದಿನ ಚಕ್ರವರ್ತಿ ಸಮರ್ಪಿಸಿದ ಚಿನ್ನದ ತುಳಸಿ ದಳಗಳು ಪಕ್ಕಕ್ಕೆ ತೊಲಗಿ ಮಣ್ಣಿನಿಂದ ತಯಾರಿಸಿದ ತುಳಸಿದಳಗಳು ಬಂದು ಸೇರಿದವು. ರಾಜನು ಆಶ್ಚರ್ಯದಿಂದ....





8
ಸ್ವಾಮಿ! ಯಾರು ಆ ಭಕ್ತನು?
ಭೀಮನೆಂಬುವ ಕುಂಭಾರ ನನಗೆ ಪರಮ ಭಕ್ತನು !
ಕ್ಷಣದಲ್ಲಿ ಚಕ್ರವರ್ತಿ ಅಹಂಕಾರ ಮುರಿದು ಬಿತ್ತು. ವಿವೇಕವು ಎಚ್ಚರವಾಯಿತು.... ವಿನಯವು ಬಂತು
9
ಸ್ವಾಮಿ! ಆ ಮಹಾಭಕ್ತನನ್ನು ನನಗೆ ತೋರಿಸಿರಿ?
ತಪ್ಪದೇ ನೋಡುವಿಯಂತೆ ನಡೆ!....
ಸ್ವಾಮಿಯೊಂದಿಗೆ ತೊಂಡಮಾನನು ಕುರುವಪುರಕ್ಕೆ ಹೊರಟನು. ಅಲ್ಲಿ ಭೀಮನು ಆತನ ಹೆಂಡತಿ ಪರಮಾನಂದ ಗೊಂಡರು.
10
ಸ್ವಾಮಿ! ನಿನಗೆ ನಮ್ಮ ನಮಸ್ಕಾರಗಳು. ನಾವು ಮಣ್ಣಿನ ಮನುಷ್ಯರು...ನಮಗೆ, ಭಕ್ತಿ, ಪೂಜೆ ಇವ್ಯಾವೂ ಗೊತ್ತಿಲ್ಲ! ನಿನಗೆ ತಕ್ಕಂತೆ ಏನು ಮಾಡಲಾರೆ....
ಭೀಮನು! ನಿರ್ಮಲವಾದ ನಿನ್ನ ಮಾತುಗಳು ನನಗಿಷ್ಟವಾಯಿತು ನೀನು ನನ್ನ ಪರಮ ಭಕ್ತನು. ನೀನು ಕೊಡುವ ಮಣ್ಣಿನ ದಳಗಳೇ ನನ್ನ ಆನಂದ ನಿಲಯದೊಳಗೆ ಸೇರುತ್ತವೆ.
11
ತಮಾಲಿ! ನನಗೆ ತುಂಬಾ ಹಸಿವಾಗುತ್ತಿದೆ. ತಿನ್ನಲು ಏನಾದರೂ ಕೊಡು?
ತಕ್ಷಣವೇ ಸ್ವಾಮಿ....
ತಕ್ಷಣವೇ ಹೊಸ ಮಡಿಕೆಯಲ್ಲಿ ಜೋಳದ ಮುದ್ದೆಯನ್ನು ಮಾಡಿ ತಂದು ಸ್ವಾಮಿಗೆ ಕೊಟ್ಟಳು ತಮಾಲಿ.
12
ಮುದ್ದೆ ತುಂಬಾ ರುಚಿಯಾಗಿದೆ. ನಿಮಗೇನು ಬೇಕು ಕೇಳಿರಿ....
ನಿನ್ನ ದರ್ಶನವಾಯಿತು! ನಮಗಿಷ್ಟೆ ಸಾಕು....




ದಿವ್ಯ ವಿಮಾನವು ಬಂದು ಆ ದಂಪತಿಯರ ಮುಂದೆ ಬಂದು ನಿಂತಿತು. ಶ್ರೀ ವೆಂಕಟೇಶ್ವರ ಸ್ವಾಮಿಗೆ ನಮಸ್ಕರಿಸಿ, ಕುಂಭಾರದಾಸನಾಗಿ ಕೀರ್ತಿಯನ್ನು ಪಡೆದು, ಭೀಮನು ತನ್ನ ಹೆಂಡತಿ ತಮಾಲಿಯೊಂದಿಗೆ ವಿಮಾನವನ್ನು ಹತ್ತಿ ಶ್ರೀ ವೈಕುಂಠವನ್ನು ಸೇರಿದನು.




ಶ್ರೀ ವೆಂಕಟೇಶ್ವರ ಸ್ವಾಮಿಯೊಂದಿಗೆ ಸೇರಿ ತೊಂಡಮಾನ್ ಚಕ್ರವರ್ತಿ ಆನಂದ ನಿಲಯಕ್ಕೆ ಸೇರಿಕೊಂಡರು

ಮುಂದಿನ ಸಂಚಿಕೆಯಲ್ಲಿ ಶ್ರೀ ವೆಂಕಟೇಶ್ವರನ ಮತ್ತೊಂದು ದಿವ್ಯಲೀಲಾ ವಿಲಾಸವನ್ನು ದರ್ಶಿಸೋಣ.

ಸ್ವಸ್ತಿ



# ಮಹಾತ್ಮರನ್ನೇ ಆಶ್ರಯಿಸಬೇಕು!

ಬಾಲನೀತಿ

-ಮೂಲ : ಡಾ॥ ಸಮುದ್ರಾಲ ಲಕ್ಷ್ಮಣಯ್ಯ

-ಅನುವಾದ : ಶ್ರೀಮತಿ

ನೀಚಾಶ್ರಯೋ ನ ಕರ್ತವ್ಯಃ; ಕರ್ತವ್ಯೋ ಮಹದಾಶ್ರಯಃ।
ಈಶಾಶ್ರಯೋ ಮಹೋನಾಗಃ ಪಪ್ರಚ್ಛ ಗರುಡಂ ಸುಖಂ॥

ಒಬ್ಬ ವ್ಯಕ್ತಿ ಯಾವುದೇ ತೊಂದರೆ - ಅಡಚಣೆಗಳಿಲ್ಲದೇ ಎಲ್ಲಾ ಸಂದರ್ಭಗಳಲ್ಲೂ ತನ್ನಷ್ಟಕ್ಕೆ ತಾನೇ ಜೀವಿಸಲಾರನು. ಕ್ಲಿಷ್ಟ ಪರಿಸ್ಥಿತಿಗಳೆದುರಾದಾಗ ತನಗಿಂತಲೂ ಉತ್ತಮನಾದ ಮತ್ತೊಬ್ಬ ವ್ಯಕ್ತಿಯನ್ನು ಆಶ್ರಯಿಸಿ ಆತನ ಸಹಯೋಗದಿಂದ ಕಷ್ಟಗಳಿಂದ ಹೊರಬರುತ್ತಾನೆ. ಇದೇ ಲೋಕಸ್ಥಿತಿ.

ಹಾಗೆ ಮತ್ತೊಬ್ಬ ವ್ಯಕ್ತಿಯನ್ನು ಆಶ್ರಯಿಸಬೇಕಾಗಿ ಬಂದಾಗ ಮಹನೀಯನಾದ ತನಗಿಂತಲೂ ಶ್ರೇಷ್ಠನಾದ ವ್ಯಕ್ತಿಯನ್ನು ಆಶ್ರಯಿಸಬೇಕೇ ಹೊರತು ನೀಚರನ್ನಲ್ಲ ಎಂದು ಈ ಮೇಲಿನ ಶ್ಲೋಕವು ಬೋಧಿಸುತ್ತದೆ.

ಅಲ್ಲೊಂದು ಬೆಟ್ಟ. ಆ ಬೆಟ್ಟದ ಮೇಲೊಂದು ಸರ್ಪವಿತ್ತು. ಒಂದು ದಿನವದು ಬೆಟ್ಟದ ಮೇಲೆ ಅಲ್ಲಿಂದಿಲ್ಲಿಗೆ ವಿಹರಿಸುತ್ತಿತ್ತು. ಅಷ್ಟರಲ್ಲಿ ವಾಯು ಮಾರ್ಗದಲ್ಲಿ ಪಯಣಿಸುತ್ತಿದ್ದ ಗರುಡವು ಸರ್ಪವನ್ನು ಸಮೀಪಿಸಿದೆ.

ಇಂತಹ ಸ್ಥಿತಿಯಲ್ಲಿ ಸಾಮಾನ್ಯ ಹಾವಾಗಿದ್ದರೆ ತನ್ನ ಆತ್ಮ ರಕ್ಷಣೆಗಾಗಿ ಯಾವುದಾದರೊಂದು ಸಂದಿಗೊಂದಿಯಲ್ಲಿ ತೂರುವ ಪ್ರಯತ್ನ ಮಾಡುತ್ತಿತ್ತು. ಆದರೆ ಆ ಸರ್ಪವು ಹಾಗೆ ಮಾಡಲಿಲ್ಲ.

ಮೇಲಾಗಿ,ಗರುಡನನ್ನು ಕಂಡು "ಏನು ಗೆಳೆಯನೇ! ಎಲ್ಲಾ ಕುಶಲವೇ?" ಎಂದು ಪ್ರಶ್ನಿಸಿತು. ಗರುಡವು ಸಹಾ "ಹ್ಞಾಂ। ಕುಶಲವೇ, ನೀನು ಕ್ಷೇಮವೇ?" ಎಂದು ಪ್ರತಿ ಪ್ರಶ್ನೆ ಹಾಕಿದನು.

ಇಬ್ಬರೂ ಹೀಗೆ ಪರಸ್ಪರ ಕುಶಲ ಪ್ರಶ್ನೆಗಳನ್ನು ಹಾಕಿಕೊಳ್ಳುತ್ತಾ ನಸುನಗುತ್ತಾ ತಮ್ಮ ತಮ್ಮ ದಾರಿಗೆ ತೆರಳಿದ್ದಾರೆ.



ಇದು ಹೇಗಾದರೂ ಘಟಿಸಬಲ್ಲದೆಂದು ನಮಗೆ ಆಶ್ಚರ್ಯವುಂಟಾಗಬಹುದು. ಆದರೆ ವಾಸ್ತವ್ಯವಿದು.

ಈ ಬೆಟ್ಟ ಕೈಲಾಸವು, ಆ ಸರ್ಪವು ಶಿವನ ಕೊರಳಲ್ಲಿನ ಆಭರಣವಾದ ಮಾಲೆ. ದಿನವು ವಿಹಾರಕ್ಕೆಂದು ಬಂದು ಗರುಡನ ಕಣ್ಣಿಗೆ ಬಿದ್ದಿದೆ. ಮಹಾದೇವನಾದ ಮಹಾತ್ಮನಾದ ಶಿವನನ್ನು ಆಶ್ರಯಿಸಿದಕ್ಕಾಗಿ ಆ ಗರುಡನು ಯಾವುದೇ ವಿಧವಾದ ಹಾನಿಯನ್ನುಂಟು ಮಾಡಲಿಲ್ಲ.

**ಆದ್ದರಿಂದ, ಮಹಾತ್ಮರನ್ನು ಆಶ್ರಯಿಸಬೇಕೇ ವಿನಃ ನೀಚರನ್ನು ಆಶ್ರಯಿಸಬಾರದು ಎಂದು ಈ ನೀತಿ ಶ್ಲೋಕವು ತಿಳಿಸಿಕೊಡುತ್ತದೆ.**



# ಪ್ರಜ್ಞಾವಂತ ಬಾಲಕ

ತಿರುಪತಿಗೆ ಸೇರಿದ ಶ್ರೀ ಪಿ. ನಾಗೇಶ್ವರ, ಶ್ರೀಮತಿ. ಪದ್ಮಾವತಿ ದಂಪತಿಯರ ಕುಮಾರನೇ ಹೇಮ ವೆಂಕಟ್ ನಾರಾ ಯಣ. (9 ನೇ ತರಗತಿ) ಭಗವದ್ಗೀತೆ ಶ್ಲೋಕಗಳನ್ನು ಸುಲಭವಾಗಿ, ಅನರ್ಗಳವಾಗಿ ಹಾಡಿದನು.ಆಧ್ಯಾತ್ಮಿಕ ಪಂಡಿತರು ಸಹಾ ಆಶ್ಚರ್ಯಗೊಂಡರು. ವಿಷ್ಣು ಸಹಸ್ರಾನಾಮವನ್ನು ಒಂದೇ ಸಮನೇ ಉಚ್ಚರಿಸುತ್ತಾನೆ. ಈ ಪುಟಾಣಿಯು ತನ್ನ ಪ್ರತಿಭೆಗೆ ಎಷ್ಟೋ ಪುರ ಸ್ಕಾರಗಳನ್ನು ಪಡೆದಿದ್ದಾನೆ.

ಬಹುಮಾನಗಳು

- 2012 ರಲ್ಲಿ ವರ್ಡ್ಸ್ ವರ್ತ ಇಂಟರ್‌ನೇಷ್ನಲ್‌ನವರು ನಿರ್ವಹಿಸಿದ 'ಸ್ಪೆಲ್ಲಿಂಗ್ ಬಿ' ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದನು.

- 2012 ರಲ್ಲಿ ಪ್ರಸಾರ ಭಾರತಿಯವರು ವಿಷ್ಣು ಸಹಸ್ರನಾಮಪಾರಾ ಯಣವನ್ನು ರಿಕಾರ್ಡ್ ಮಾಡಿ ಪ್ರಸಾರ ಮಾಡಿ ಹೊಗಳಿದರು.

-2012 ರಲ್ಲಿ ವೇದಿಕ್ ವಿಶ್ವವಿದ್ಯಾಲಯ ನಿರ್ವಹಿಸಿದ ಭಗವದ್ಗೀತೆ ಶ್ಲೋಕಗಳ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದನು.

- 2013 ರಲ್ಲಿ ಸಂಸ್ಕೃತ ಭಾರತಿಯವರು ನಿರ್ವಹಿಸಿದ ಭಗವದ್ಗೀತೆ ಕಂಠ ಪಾಠ ಪರೀಕ್ಷೆಯಲ್ಲಿ ಮೊದಲ ಬಹುಮಾನ ಪಡೆದನು.

- 2013 ರಲ್ಲಿ ಶ್ರೀ ವೆಂಕಟೇಶ್ವರ ವೇದಿಕ್ ವಿಶ್ವವಿದ್ಯಾಲಯ ಸಂಸ್ಕೃತ ದಿನೋತ್ಸವ ಸಂದರ್ಭದಲ್ಲಿ ನಿರ್ವಹಿಸಿದ ಭಗವದ್ಗೀತೆ ಶ್ಲೋಕದ ಸ್ಪರ್ಧೆಯಲ್ಲಿ ಎರಡನೆ ಬಹುಮಾನ ಪಡೆದನು.

-2013 ರಲ್ಲಿ ಶ್ರೀ ಕೃಷ್ಣಜನ್ಮಾಷ್ಟಮಿ ಸಂದರ್ಭದಲ್ಲಿ ಇಸ್ಕಾನ್‌ನಲ್ಲಿ ನಿರ್ವ ಹಿಸಿದ ಚಿತ್ರಲೇಖನ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದನು.

- ಘಂಟಶಾಲ ಆರಾಧನೋತ್ಸವಗಳು 2016 ರಲ್ಲಿ ರಾಜಮಂಡ್ರಿಯಲ್ಲಿ ನಡೆದ ಸಂದರ್ಭದಲ್ಲಿ ತನ್ನ ಪ್ರತಿಭೆಯನ್ನು ತೋರಿದನು.

-2014 ರಿಂದ 2018 ರ ವರೆಗೆ ಪ್ರತಿವರ್ಷವೂ ಶ್ರೀ ಕೃಷ್ಣಜನ್ಮಾಷ್ಟಮಿ, ಗೀತಾ ಜಯಂತಿ ಸಂದರ್ಭದಲ್ಲಿ ಇಸ್ಕಾನ್‌ನಲ್ಲಿ ನಿರ್ವಹಿಸಿದ ಸ್ಪರ್ಧೆಗಳಲ್ಲಿ ಮೊದಲ ಬಹುಮಾನ ಪಡೆದನು.

- 07-12-2019 ರಂದು ಹೆಚ್.ಡಿ.ಪಿ.ಪಿ., ತಿ.ತಿ.ದೇ, ಮತ್ತು ಇಸ್ಕಾನ್ ಸಂಯುಕ್ತ ನೇತೃತ್ವದಲ್ಲಿ ತಿರುಪತಿಯಲ್ಲಿ ನಡೆದ ಗೀತಾ ಜಯಂತಿ ಉತ್ಸವಗಳು ನಡೆ ಯಿತು. ಹೆಚ್.ಡಿ.ಪಿ.ಪಿ. ಕಾರ್ಯದರ್ಶಿಯರಿಂದ ಬಹುಮಾನ ಪಡೆದನು.

-07-12-2019 ರಂದು ಚಿನ್ಮಯ ಮಿಷನ್‌ನಿಂದ ಜಿಲ್ಲೆ ಹಂತದಿಂದ ರಾಜ್ಯದ ಹಂತದವರೆಗೆ ಅರ್ಹತೆಯನ್ನು ಪಡೆದನು.

ನಮ್ಮ ಹಿಂದೂ ಸಂಸ್ಕೃತಿಗೆ ವಾರಸದಾರರಾದ ಮಕ್ಕಳಿಗೆ ಪುರಾಣ, ಇತಿಹಾಸ, ಕಾವ್ಯದ ಬಗ್ಗೆ ಜ್ಞಾನವನ್ನು ಹೆಚ್ಚಿಸಲು ಪ್ರತಿತಿಂಗಳೂ 'ಕ್ವಿಜ್' ಅನ್ನು ನೀಡುತ್ತಿದ್ದೇವೆ.

# ಕ್ವಿಜ್

-ನಿರ್ವಹಣೆ ಶ್ರೀಮತಿ. ವಿ. ಉಮಾರಾಣಿ

1) ತಿರುಮಲೇಶನಿಗಿಂತ ಮೊದಲು ಯಾವ ದೇವರನ್ನು ದರ್ಶಿಸಬೇಕು?

ಅ) ವಾಸುದೇವ ಆ) ವಾಮನ

ಇ) ವರಾಹಸ್ವಾಮಿ ಈ) ವೆಂಕಟೇಶ್ವರಸ್ವಾಮಿ

2) ಸತಿ ಸಾವಿತ್ರಿ ಗಂಡನ ಹೆಸರು ಏನು?

ಅ) ಸತ್ಯವ್ರತನು ಆ) ಸತ್ಯವಂತ

ಇ) ಸತ್ಯಕೀರ್ತಿ ಈ) ಸತ್ಯಮೂರ್ತಿ

3) ಶಕುಂತಲೆಯನ್ನು ಸಾಕಿದ ತಂದೆಯಾರು?

ಅ) ಕಣ್ವಮಹರ್ಷಿ ಆ) ಮೃಕಂಡ ಮಹರ್ಷಿ

ಇ) ಭೃಗುಮಹರ್ಷಿ ಈ) ಅತ್ರಿಮಹರ್ಷಿ

4) ಮಹಾಭಾರತದಲ್ಲಿ ಎಷ್ಟು ಪರ್ವಗಳಿವೆ?

ಅ) ಹನ್ನೊಂದು ಆ) ಹನ್ನೆರಡು

ಇ) ಹದಿನೆಂಟು ಈ) ಇಪ್ಪತ್ತೆಂಟು

5) ಶ್ರೀ ಪದ್ಮಾವತಿ ಅಮ್ಮನವರು ನೆಲೆಸಿದ ಕ್ಷೇತ್ರ?

ಅ) ಶ್ರೀನಿವಾಸಮಂಗಾಪುರಂ ಆ) ಅಲಮೇಲುಮಂಗಾಪುರಂ

ಅ) ನಾರಾಯಣವನಂ ಈ) ನಾಗುಲಾಪುರಂ

6) ಆಂಧ್ರಭೋಜನಾರು?

ಅ) ಮಹಾಕವಿ ಕಾಳಿದಾಸ ಆ) ಶ್ರೀ ಕೃಷ್ಣದೇವರಾಯ

ಇ) ಭೋಜರಾಜ ಈ) ತ್ಯಾಗರಾಜ

7) ಸ್ವಾಮಿಯವರಿಗೆ "ಮುತ್ತಿನ ಆರತಿ" ಯಾರು ಪ್ರಾರಂಭಿಸಿದರು?

ಅ) ಅನ್ನಮಯ್ಯ ಆ) ಪೆದತಿರುಮಲಯ್ಯ

ಇ) ತಾಳ್ಳಪಾಕ ತಿಮ್ಮಕ್ಕ ಈ) ತರಿಗೊಂಡವೆಂಗಮಾಂಬ


• • • • • • • • • • • •

ಉತ್ತರಗಳು:

1) ಇ 2) ಆ 3) ಅ 4) ಇ 5) ಆ 6) ಆ 7) ಈ

# ಚಿತ್ರಲೇಖನ

**ಈ ಗೊಂಬೆಗೆ ಬಣ್ಣವನ್ನು ತುಂಬಿರಿ.......**



**ಮೇಲಿನ ಗೊಂಬೆಯನ್ನು ಕೆಳಗಿನ ಬಾಕ್ಸ್‌ನಲ್ಲಿ ಬರಿಯೋಣ...**



ಬಾಲಭಕ್ತನು......



ನಿತ್ಯಾತ್ಮನಾಗಿದ್ದು
  ನಿತ್ಯನಾಗಿ ಬೆಳಗುವವನು
ಸತ್ಯಾತ್ಮನಾಗಿದ್ದು
  ಸತ್ಯದಲ್ಲಿ ಬೆಳಗುವವನು
ಪ್ರತ್ಯಕ್ಷನಾಗಿದ್ದು
  ಬ್ರಹ್ಮನಲ್ಲಿ ನೆಲೆಗೊಂಡು
ಸಂಸ್ತುತ್ಯನಾಗಿದ್ದಾನೆ
  ತಿರುವೇಂಕಟಾದ್ರಿ ಪ್ರಭುವು

– ಅನ್ನಮಯ್ಯ